## ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/00008/2016–17/ 7294 **ದಿನಾಂಕ: 19.12.2016**

**– :ಸಾರಿಗೆ ವಾಹನಗಳನ್ನು ಒದಗಿಸಲು ವಾರ್ಷಿಕ / ದ್ವೈವಾರ್ಷಿಕ ಅವಧಿ ಗುತ್ತಿಗೆ ಬಗ್ಗೆ ಇ– ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲು ಶೇಖರಣೆ ಮಾಡಲು ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು ವಾರ್ಷಿಕ/ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 26.12.2016 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | **ದಿನಾಂಕ: 27.01.2017 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | **ದಿನಾಂಕ: 30.01.2017 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | **ದಿನಾಂಕ: 01.02.2017 ರಂದು ಬೆಳಿಗ್ಗೆ: 11.30 ಗಂಟೆಗೆ** |

ಈ ಕೆಳಗೆ ನಮೂದಿಸಿರುವ ಹಾಲು ಶೇಖರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ **2005** ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನಗಳನ್ನು ಒಂದು/ಎರಡು ವರ್ಷದ ಅವಧಿ ಅಥವಾ **ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ** ಬಾಡಿಗೆ/ಗುತ್ತಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಲಾಗಿದೆ. :–

| **ಮಾರ್ಗದ ಸಂಖ್ಯೆ** | **ಹಾಲು ಶೇಖರಣ ಮಾರ್ಗದ ಹೆಸರು** | **ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ** | **ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ)** | **ಇ.ಎಂ.ಡಿ ₹** | **ಭದ್ರತಾ ಠೇವಣಿ ₹** |
|---|---|---|---|---|---|
| 1 | **ಎನ್.ಆರ್.ಪುರ ಹಾಲು ಶೇಖರಣಾ ಮಾರ್ಗ** (ಶಿವಮೊಗ್ಗ ಡೈರಿ, ಕುದುರೆಗುಂಡಿ, ಗುಬ್ಬಿಗ, ಸುತ್ತ, ಮುತ್ತಿನಕೊಪ್ಪ, ಕೆ.ಕಣಬೂರು, ಶಿವಮೊಗ್ಗ ಡೈರಿ) **ಒಂದು ವರ್ಷ** | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 270 ಕಿ.ಮೀ | 25,000/– | 30,000/– |
| 2 | **ತುಂಗಭದ್ರಾ–2 ಹಾಲು ಶೇಖರಣಾ ಮಾರ್ಗ** (ಶಿವಮೊಗ್ಗ ಡೈರಿ, ಹಿರಿಯೂರು, ಬೊಮ್ಮನಕಟ್ಟೆ, ಕಡದಕಟ್ಟೆ, ಭಂಡಾರಹಳ್ಳಿ ಶಿವಮೊಗ್ಗ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 50 ಕಿ.ಮೀ | 25,000/– | 30,000/– |
| 3 | **ತುಂಗಾ–2 ಹಾಲು ಶೇಖರಣೆ ಮಾರ್ಗ** (ಶಿವಮೊಗ್ಗ ಡೈರಿ, ಚಿತ್ರಶೆಟ್ಟಿಹಳ್ಳಿ, ಪುರದಾಳ್, ಅನುಪಿನಕಟ್ಟೆ, ಗೋಪಿಶೆಟ್ಟಿಕೊಪ್ಪ, ಶಿವಮೊಗ್ಗ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 128 ಕಿ.ಮೀ | 25,000/– | 30,000/– |
| 4 | **ತೇರುಮಲ್ಲೇಶ್ವರ –3 ಹಾಲು ಶೇಖರಣೆ ಮಾರ್ಗ** ( ಚಿತ್ರದುರ್ಗ ಶೀ.ಕೇಂದ್ರ, ಯಲ್ಲದಕೆರೆ, ಬ್ಯಾರಮಡು, ಹಾಲಮಾದೇನಹಳ್ಳಿ, ಚಿತ್ರದುರ್ಗ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 320 ಕಿ.ಮೀ | 25,000/– | 30,000/– |
| 5 | **ಬಸವೇಶ್ವರ –1 ಹಾಲು ಶೇಖರಣಾ ಮಾರ್ಗ** ( ಚಿತ್ರದುರ್ಗ ಶೀ.ಕೇಂದ್ರ, ಸಿದ್ದಮ್ಮನಹಟ್ಟಿ, ಜಗಳೂರು ಗೊಲ್ಲರಹಟ್ಟಿ, ಹೊಸಕೆರೆ ಚಿತ್ರದುರ್ಗ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 270 ಕಿ.ಮೀ | 25,000/– | 30,000/– |
| 6 | **ಚಂದ್ರಗುತ್ತಿ ಹಾಲು ಶೇಖರಣಾ ಮಾರ್ಗ** (ತಡಗಣಿ ಶೀ.ಕೇಂದ್ರ, ಗುಡುಗಿನಕೊಪ್ಪ, ಕೌಲಿ, ತೊಗರ್ಸಿ, ಬಳ್ಳಿಗಾವಿ, ತಡಗಣಿ ಸಿ.ಸಿ. ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 62 ಕಿ.ಮೀ | 25,000/– | 30,000/– |
| 7 | **ವರದಾ ಹಾಲು ಶೇಖರಣಾ ಮಾರ್ಗ** (ಆನಂದಪುರ ಶೀ.ಕೇಂದ್ರ, ನಿಸರಾಣಿ, ಮಳಲಗದ್ದೆ, ಉಳವಿ, ಬಿಳಿಸಿರಿ, ಹೊರಬೈಲು, ಆನಂದಪುರ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 224 ಕಿ.ಮೀ | 25,000/– | 30,000/– |
| 8 | **ಭದ್ರಾ–2 ಹಾಲು ಶೇಖರಣೆ ಮಾರ್ಗ** (ಶಿವಮೊಗ್ಗ ಡೈರಿ, ತಾರಿಕಟ್ಟೆ, ರಬ್ಬರ್ ಕಾಡು, ಹೊನ್ನಟ್ಟಿಹೊಸೂರು, ಸುಲ್ತಾನ್ ಮಟ್ಟಿ, ಅರಳಿಕೊಪ್ಪ ಶಿವಮೊಗ್ಗ ಡೈರಿ) | 2.5 ಟನ್ | 88 ಕಿ.ಮೀ | 30,000/– | 40,000/– |
| 9 | **ನಂಜುಡೇಶ್ವರ –2 ಹಾಲು ಶೇಖರಣೆ ಮಾರ್ಗ** (ಶಿವಮೊಗ್ಗ ಡೈರಿ, ಹೊಸಳ್ಳಿ, ತಳ್ಳಿಕಟ್ಟೆ, ನಾಗತಿಬೆಳಗಲು, ಕೆ.ಕೆ.ಹೊಸೂರು, ಕೆ.ಕೆ.ಮಗ್ಗಿ ಶಿವಮೊಗ್ಗ ಡೈರಿ) | 2.5 ಟನ್ | 104 ಕಿ.ಮೀ | 30,000/– | 40,000/– |
| 10 | **ಮೊಳಕಾಲ್ಮೂರು ಹಾಲು ಶೇಖರಣಾ ಮಾರ್ಗ** (ಬಿ.ಜಿ. ಕೆರೆ ಶೀ.ಕೇಂದ್ರ, ಎಸ್.ಹನುಮಪುರ, ವೆಂಕಟಪುರ, ಹೆಚ್.ದಡಗೂರು ಬಿ.ಜಿ.ಕೆರೆ ಶೀ.ಕೇಂದ್ರ) | 2.5 ಟನ್ | 250 ಕಿ.ಮೀ | 30,000/– | 40,000/– |

**ನಿಬಂಧನೆ ಮತ್ತು ಷರತ್ತುಗಳು**

1. **ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

**ಮುಂದುವರೆದಿದೆ.....**

2. **ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**
3. **ಕನಿಷ್ಠ ಇ.ಎಂ.ಡಿ. ರೂ. 25,000/– ಆದರೆ ಶೇಖರಣೆ ಮಾರ್ಗದ ವಾಹನಗಳಿಗೆ, ಮ್ಯಾಕ್ಸ್ ಪಿಕ್‌ಅಪ್/ ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ ವಾಹನಕ್ಕೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ಶೇಖರಣಾ ವಾಹನಗಳು 2005 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. **ಟೆಂಡರ್ ದರ ಒಪ್ಪಿಗೆಯಾದ ಕೂಡಲೇ ಹಾಲು ಸಾಗಾಣಿಕೆ ವಾಹನವನ್ನು FSSAI ಲೈಸನ್ಸ್/ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.** ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸ್‌ಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು. **(ಕ್ರ.ಸ0.1 ರ ಎನ್.ಆರ್.ಪುರ ಹಾಲು ಶೇಖರಣಾ ಮಾರ್ಗದ ವಾಹನದ ಗುತ್ತಿಗೆಯು ಒಂದು ವರ್ಷದ ಅವಧಿಯದ್ದಾಗಿರುತ್ತದೆ.)**
6. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
7. ಹಾಲು ಶೇಖರಣಾ/ವಿತರಣಾ/ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
8. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
9. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
10. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 19.12.2016
ಸ್ಥಳ : ಮಾಚೇನಹಳ್ಳಿ